ಮಲ್ಲಿಕಾರ್ಜುನ, ಸುರಧೇನುಪುರ
ಕಾಮನಬಿಲ್ಲಲ್ಲಿ ಕಪ್ಪು ಬಣ್ಣ ಏಕಿಲ್ಲ?



ಅದು ಹಿನ್ನೆಲೆಯಲ್ಲಿ ಇರುವುದರಿಂದ; ಕಾರ್ಮೋಡದಲ್ಲಿ ಕಪ್ಪಿರುತ್ತದಲ್ಲ.

ಅನಸೂಯಾ ಟಿ, ಕೇದಿಗೆಮನೆ
ಭಗವಂತ ಪರೀಕ್ಷೆ ಮಾಡುತ್ತಾನಂತೆ. ಅದು ಯಾವ ಪರೀಕ್ಷೆ ರಾಮ್?
ಫೈನಲ್ ಎಕ್ಸಾಮ್. ಗೀತೆ, ದೇವಸ್ತೋತ್ರಗಳು ವೃದ್ಧರ ಸಿಲಬಸ್.

ಅಮರಯ್ಯಾ ಪತ್ರಿಮಠ, ಸುರಪುರ
ಯಾವುದು ಮಿಥ್ಯ? ಯಾವುದು ಸತ್ಯ?
ಸಿಹಿ ನಾಲಿಗೆಯಲ್ಲುಳಿಯುವುದು ಮಿಥ್ಯ; ಸೊಂಟದಲ್ಲಿ ಟೈರಾಗುವುದು ಸತ್ಯ.

ವಿ. ಹೇಮಂತಕುಮಾರ್, ಬೆಂಗಳೂರು
ಅಡುಗೆ ನಿಂದು, ಊಟ ನಂದು ಅಂತಿದ್ದಾಳಲ್ಲ?



ಆರ್ಡರ್ ನಂದು, ಊಟ ಸ್ವಿಗ್ಗೀದು ಎಂದು ನೋಡಿ.

ಬಿ. ಚಂದ್ರೇಗೌಡ, ಬೆಂಗಳೂರು
ಯಕ್ಷಪ್ರಶ್ನೆಗೂ, ನಮ್ಮ ಪ್ರಶ್ನೆಗಳಿಗೂ ಏನು ವ್ಯತ್ಯಾಸ?
ನಿಮ್ಮ ಪ್ರಶ್ನೆಗಳಿಗೆ ಲೌಕಿಕ, love kick ಉತ್ತರಗಳು ಲಭ್ಯ.

ಸುಮನಾ, ತೆಲಂಗಾಣ
ಚಂದ್ರನ ಭೂಮಿಯಲ್ಲಿ ಮನೆ ಕಟ್ಟಲು ಈಗಲೇ ಸೈಟ್ ತೊಗೋಬೇಕಂತೆ. ನಿಜವೇ ರಾಂ?
ಅದನ್ನೇ ಫೋರ್‌ಸೈಟ್ ಎನ್ನುವುದು!

ಬಿ.ಆರ್. ಉಷಾ, ಬೆಂಗಳೂರು
ಮಂತ್ರಿಗಳಾದರೆ ಒಳ್ಳೆಯದೋ? ಜ್ಯೋತಿಷಿಗಳಾದರೆ ಒಳ್ಳೆಯದೋ?
ಮಂತ್ರಿಯೇ. ಅವನು ಯಾರ ಪ್ರಶ್ನೆಗೂ ಉತ್ತರಿಸದೆಯೇ ಲೂಟಿಗೈಯಬಹುದು.

ವೈ.ವಿ. ಪ್ರಭಾಕರ, ಬೆಂಗಳೂರು
ಬೆತ್ತದಿಂದ ಬಾರಿಸುವ ಶಿಕ್ಷಕನಿಗೆ ಜೈಲಾಗುವಾಗ ದೊಣ್ಣೆಯಿಂದ ಬಾಸುಂಡೆ ಬರಿಸುವ ಪೊಲೀಸರಿಗೇಕೆ ಜೈಲಾಗದು?
ನಮ್ಮ ಶಿಕ್ಷಣ ದಂಡದ ಮಟ್ಟದಿಂದಿಳಿದು ದಂಡಂ ದಶಗುಣಂ ಮಟ್ಟ ತಲುಪಿರುವುದರಿಂದ.

ರುದ್ರಮೂರ್ತಿ ಎಂ.ಜೆ. ಚಿತ್ರದುರ್ಗ
ಇಲ್ಲೊಬ್ಬರು ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ; ಗಂಡೊಂದು ಕುಡಿದರೆ ಬಾರೊಂದು ತೆರೆದಂತೆ ಎನ್ನುವರಲ್ಲ?
ಬಾರಷ್ಟೇ ಅಲ್ಲ, ಮಸಣದಲ್ಲೊಂದು ಗುಂಡಿಯನ್ನೂ ಅಗೆದಂತೆ ಎಂದು ಸೇರಿಸಿ.

ಎಂ.ಎ. ಕುಮಾರ್, ಬೆಂಗಳೂರು
ಹೆಣ್ಣಿನ ಕಂಠ ಕೋಮಲ; ಸಮಯ ಸಂದರ್ಭದಲ್ಲಿ ಕರ್ಕಶ?
ಯಾವುದೇ ಸದ್ದಾಗಲಿ, ಆಪ್ತವಾದುದು ಕೋಮಲ; ಅನಾಪ್ತವಾದುದು ಕರ್ಕಶ.

ರತ್ನಜ, ಮೈಸೂರು
ಮಾತೃಭಾಷೆಯಲ್ಲಿ ಹೇಳಲು ಮುಜುಗರವಾಗುವುದನ್ನು ಇಂಗ್ಲಿಷಲ್ಲಿ ಸಲೀಸಾಗಿ ಹೇಳುವರಲ್ಲ?
ಮೈಲಿಗೆ ವಿಷಯಗಳಿಗೆ ಮೈಲುಗಟ್ಟಲೆ ದೂರದ ಭಾಷೆಯೇ ಸರಿಯಂತೆ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಚರ್ಮದ ಮೇಲಿನ ಗಾಯಕ್ಕೆ ಮುಲಾಮು ಇದೆ. ಮನಸ್ಸಿನ ಗಾಯಕ್ಕೆ?
ಸಮಯವೇ ಮುಲಾಮು.

ಜೀವಿ, ಗೊಂಡೇದಹಳ್ಳಿ
ಸಾರಿಗೆಯಲ್ಲಿ ಶಬ್ದ ಮಾಡದ ಬಸ್ಸುಗಳಿರುವಂತೆ ಸಂಸಾರದಲ್ಲಿ ಸದ್ದಿಲ್ಲದ ಹೆಂಡತಿಯರು ಸಿಗಬಹುದೆ?
ಸಿಗುವರು. ಆ ಮಟ್ಟಕ್ಕೆ ನೀವು ಅವರನ್ನು ಮೇಂಟೇನ್ ಮಾಡುವ ಸಾಮರ್ಥ್ಯವಿರಬೇಕಷ್ಟೆ.

## ಬಹುಮಾನಿತ ಪ್ರಶ್ನೆ

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಚಂದ್ರನಂಗಳಕ್ಕೆ ಕಾಲಿರಿಸಿದ ನಾವು ಮೂಢನಂಬಿಕೆಗಳಿಂದ ಹೊರಬರುತ್ತಿಲ್ಲ. ಏಕೆ?
ವಿಜ್ಞಾನದ ಬೇರು ಇನ್ನೂ ಮೂಢನಂಬಿಕೆಯ ಬೇರಿನಷ್ಟು ಆಳಕ್ಕಿಳಿದಿಲ್ಲವಾದ್ದರಿಂದ.

ಪಿ. ಜಯವಂತ ಪೈ, ಕುಂದಾಪುರ
ದೇವಳದ ಹುಂಡಿಗಳಲ್ಲಿ ನಿಷೇಧಿತ ನೋಟುಗಳು ಸಿಕ್ಕಿವೆಯಂತಲ್ಲ?
ಪಾಪ ತೊಳೆಯುವ ಸೋಪು ಆಗಿರುವ ದೇವನು ನಿಷೇಧಿತವನ್ನೂ ಊರ್ಜಿತವಾಗಿಸೀಯಾನೆಂದು.

ರಮಾನಂದ ಶರ್ಮಾ, ಬೆಂಗಳೂರು
ಇತ್ತೀಚಿನ ಮದುವೆಗಳಲ್ಲಿ ಊಟ, ಉಪಚಾರಕ್ಕಿಂತ ಫೋಟೊಗ್ರಫಿಯ ಖರ್ಚೇ ಹೆಚ್ಚಂತೆ?
ಸ್ವರೂಪದ ಹಸಿವು ಹೊಟ್ಟೆಯ ಹಸಿವಿಗಿಂತ ಹೆಚ್ಚಿರುವುದೇ ಕಾರಣವಂತೆ.

ವಿಜಯ್ ಹೆಮ್ಮಿಗೆ, ಮೈಸೂರು
ರಾಜಕೀಯ ಪಕ್ಷಗಳ ಮುಖಂಡರು ತಲೆಯ ಮೇಲೆ ಟೋಪಿ ಹಾಕಿಕೊಳ್ಳುವುದೇಕೆ?



ಸಿಕ್ಕವರ ತಲೆಗೆ ಶೀಘ್ರವಾಗಿ ವರ್ಗಾಯಿಸಿಬಿಡಲು.

ಎಂ.ಸಿ. ಧನ್ಯತಾ, ಬೆಂಗಳೂರು
ಉದರಕ್ಕೂ, ಅಧರಕ್ಕೂ ಏನು ಸಂಬಂಧ?
ಅಧರ ಇನ್‌ಬಾಕ್ಸ್. ಉದರ ಹಾರ್ಡ್ ಡಿಸ್ಕ್.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಿಮಗೆ 'ಉತ್ತರಗಳ ಪಿತಾಮಹ' ಎಂಬ ಬಿರುದು ನೀಡಬಯಸುತ್ತೇವೆ. ನಿಮಗೆ ಒಪ್ಪಿಗೆಯೆ?
ನಾನು ಸಮ್ಮತಿಸಿದರೆ ಧರ್ಮರಾಯನು ಶಕುನಿಯನ್ನು ವಕೀಲನನ್ನಾಗಿಸಿಕೊಂಡು ಕೇಸ್ ಹಾಕುವನಂತೆ.

■ ರಾಮ್